# ನೆನಪಿನಂಗಳದಲ್ಲಿ ಬಾಳಪ್ಪನವರ ಮೆಚ್ಚುಗೆ ನುಡಿಗಳು

**ಖ್ಯಾತ ರಂಗಕರ್ಮಿ ಏಣಗಿ ಬಾಳಪ್ಪ ಅವರೊಂದಿಗೆ ವೇದಿಕೆಯಲ್ಲಿ ಭಾಗವಹಿಸಿದ್ದು ಎಂದೂ ಮರೆಯಲಾರದ ನೆನಪು. ಮತ್ತೊಂದು ಸಮಾರಂಭದಲ್ಲಿ ಅವರಿಂದ ಬಹುಮಾನ ಪಡೆದು ಆಶೀರ್ವಾದ ಸ್ವೀಕರಿಸಿದ್ದು ಎಂದೂ ಮರೆಯುವ ಹಾಗಿಲ್ಲ.**

■ **ಶೈಲಜಾ ಭಿಂಗೆ, ಬೆಳಗಾವಿ**




ಲಲಿತ ಕಲಾ ಪ್ರಕಾರಗಳಲ್ಲಿ ಸಂಗೀತವೇ ಇರಲಿ, ನೃತ್ಯವೇ ಇರಲಿ, ರಂಗಭೂಮಿಯೇ ಇರಲಿ. ತಮ್ಮ ಅಪೂರ್ವ ಪ್ರತಿಭೆಯನ್ನು ಅನಾವರಣಗೊಳಿಸುತ್ತಾ, ಜೀವನ ಪರ್ಯಂತ ಆ ಕ್ಷೇತ್ರಕ್ಕಾಗಿ ದುಡಿಯುವ, ಅಪರಿಮಿತ ಸಾಧನೆ ತೋರುವ ಮಂದಿ ನಮ್ಮ ನಡುವೆ ಇದ್ದಾರೆ; ಆಗಿ ಹೋಗಿದ್ದಾರೆ. ಇವರೊಂದಿಗೆ ಕಳೆಯುವ ಅಲ್ಪ ಸಮಯವೂ ಕೂಡ ನಮ್ಮ ಜೀವನದಲ್ಲಿ ಸವಿನೆನಪುಗಳ ಸಾಲಿಗೆ ಸೇರುತ್ತವೆ. ಬಹುಕಾಲ ಮನದಾಳದಲ್ಲಿ ನೆಲೆ ನಿಲ್ಲುತ್ತದೆ.

ರಂಗಭೂಮಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದವರು ಏಣಗಿ ಬಾಳಪ್ಪನವರು. ಅವರ ಅನುಭವ ಅನನ್ಯ, ಸಾಧನೆ ಶಿಖರದಷ್ಟು, ಸರಳ ಜೀವನ, ಮೃದು ಸ್ವಭಾವ. ತಮ್ಮ ಆಸಕ್ತಿ, ಅನುಭವಗಳನ್ನು ಇತರರಿಗೂ ಹಂಚಿಕೊಳ್ಳುವ ದೊಡ್ಡಗುಣ ಅವರಲ್ಲಿತ್ತು.

ಅವರ ಜೀವಿತಾವಧಿಯಲ್ಲಿ ಅನೇಕ ವೇದಿಕೆಗಳಲ್ಲಿ ತಮ್ಮ ಕಲಾಪಾಂಡಿತ್ಯ ಪ್ರದರ್ಶನ ಮಾಡಿದ್ದಾರೆ. ಭೌತಿಕವಾಗಿ ನಮ್ಮನ್ನು ಅಗಲಿದರೂ ಆ ದಿವ್ಯಚೇತನದ ನೆನಪು ಸದಾ ನೆನಪಿನಂಗಳದಲ್ಲಿದೆ. ಅವರೊಂದಿಗೆ ವೇದಿಕೆ ಹಂಚಿಕೊಳ್ಳುವ ಸಂದರ್ಭ ನನಗೊದಗಿತ್ತು. ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾನು ಹಾಡಿದ ಜನಪದ ಗೀತೆಗೆ ಬಹುಮಾನ ಹಾಗೂ ಆಶೀರ್ವಾದವನ್ನು ಅವರಿಂದ ಪಡೆದ ಭಾಗ್ಯ ನನ್ನದಾಗಿತ್ತು.

ನಮ್ಮ ಮಹಿಳಾ ಸಮಾಜದ ವತಿಯಿಂದ ನಾವು ಪ್ರತಿ ವರುಷ ಒಂದು ದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುತ್ತೇವೆ. ಬೆಟಗೇರಿ ಕೃಷ್ಣಶರ್ಮ ಆಧಾರಿತ 'ಜನಪದ ಸಿರಿ', 'ಜನಪದ ಸೌರಭ' ಅಂತೆಯೇ ನಾಟಕ, ನೃತ್ಯ ಆಧಾರಿತ 'ಜೀವನ ಜೋಕಾಲಿ' 'ಶತಕ ವೈಭವ' ಕಾರ್ಯಕ್ರಮಗಳು ಜನರ ಮನಸ್ಸನ್ನು ರಂಜಿಸಿವೆ. 2008ರಲ್ಲಿ ನಾನು ಸಮಾಜದ ಅಧ್ಯಕ್ಷೆಯಾದಾಗ ಯಶವಂತರಾವ ಸರದೇಶಪಾಂಡೆಯವರ ಮೂರು ನಾಟಕಗಳ 'ರಂಗೋತ್ಸವ'ವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದೆವು. ಒಲವೇ ಜೀವನ ಸಾಕ್ಷಾತ್ಕಾರ, ಆಲ್ ದಿ ಬೆಸ್ಟ್ ಹಾಗೂ ರಾಶಿಚಕ್ರ ನಾಟಕಗಳು ಜನಮಾನಸದಲ್ಲಿ ನೆಲೆಸಿದವು.

ಈ 'ರಂಗೋತ್ಸವ' ಉದ್ಘಾಟನೆಯು ಹಿರಿಯ ಚೇತನ ನಾಡೋಜ ಏಣಗಿ ಬಾಳಪ್ಪಜ್ಜನವರಿಂದ ನೆರವೇರಿತು. ಅವರ ಜತೆಗೆ ವೇದಿಕೆ ಹಂಚಿಕೊಂಡಾಗ ನನಗಾದ ಆನಂದವನ್ನು ಹೇಳಲಸಾಧ್ಯ. ಪಕ್ಕದಲ್ಲೇ ಕುಳಿತ ಬಾಳಪ್ಪಜ್ಜ ನನಗೆ ಹೇಳಿದ ಮಾತುಗಳು 'ಭಲೋ ಸಂಘ ಕಟ್ಟೇದಿ ನೋಡವಾ ತಂಗಿ' ಅಂತ, ಆಗ ನನಗೆ ಅನಿಸಿತು ಇದಕ್ಕಿಂತ ಹೆಚ್ಚಿನ ಮೆಚ್ಚುಗೆ ಶಹಬ್ಬಾಸ್‌ಗಿರಿ ಯಾವುದಿದೆ?

ಏಣಗಿ ಬಾಳಪ್ಪಜ್ಜನಂತಹ ಮೇರುನಟ ಯಾವ ಹಮ್ಮುಬಿಮ್ಮು ಇಲ್ಲದೆ ನಮ್ಮ ಸಮಾಜದ ವತಿಯಿಂದ ಮಾಡಿದ ಚಿಕ್ಕ ನಾಟಕಕ್ಕೆ ನಿರ್ದೇಶನ ಕೂಡ ಮಾಡಿದ್ದರು. ಸಮಾಧಾನದಿಂದ ನಾವೆಲ್ಲ ಹೆಣ್ಣು ಮಕ್ಕಳಿಗೆ ಅಭಿನಯ ಕಲಿಸಿಕೊಟ್ಟರು. ಆ ನಾಟಕಕ್ಕೆ 'ಪ್ರಥಮ ಬಹುಮಾನ' ಕೂಡ ಬಂದಿತ್ತು. ದೀರ್ಘಾಯುಷಿಯಾಗಿ 103 ವರುಷ ಬಾಳಿದ ಬಾಳಪ್ಪಜ್ಜನವರನ್ನು ಕರ್ನಾಟಕದ ಜನತೆ ಮರೆಯಲು ಸಾಧ್ಯವೇ ಇಲ್ಲ. ಬಾಳಪ್ಪಜ್ಜ ನಿಮಗೆ ನಮ್ಮೆಲ್ಲರ ಗೌರವದ ಶತ ಶತ ನುಡಿ ನಮನಗಳು.

■